ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿಸಿ ನಂ.**516/2018**

ಪಿರ್ಯಾದಿ : Nazeer Ahmed and son's partnership Firm, Yadgiri through it's partner Sri.Touseef Ahmed S/o Nazeer Ahmed, Age: 31 years, Occ: Business, R/o Station Area, Yadgiri, Tq: & Dist: Yadgiri.

ಆರೋಪಿ : ಶ್ರೀ ಶೇಖ ಕಲೀಮ, ಜೈನ ರೈಸ್ ವಲ್ಡ ಟ್ರೆಡರ್ಸ ಪ್ರೋಪ್ರೈಟರ್, ಸಾಃ ಶಾಹು ಚೌಕ, ಲಾತೂರ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅಡಿಯಲ್ಲಿ ಅರೋಪಿತನ ಹೇಳಿಕ

ಪ್ರಶ್ನೆಃ**1**ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ**?**

ಆರೋಪಿಯ ಉತ್ತರಃ

ಪ್ರಶ್ನೆ2 : ಫ್ರಾಸಾ-1 ಶ್ರೀ ತೌಷೀಫ ಅಹ್ಮದ್ ತಂದೆ ನಜೀರ್ ಅಹ್ಮದ್ ದೂರುದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಮಹಾರಾಷ್ಟ್ರ ರಾಜ್ಯದ ಲಾತೂರ್ ನಗರದಲ್ಲಿ Zain Rice World Traders ಎಂಬ ಹೆಸರಿನಲ್ಲಿ ಕೃಷಿ ಉತ್ಪನ್ನಗಳ ವ್ಯಾಪಾರ ಮಾಡುತ್ತಿದ್ದು ದೂರುದಾರ ಯಾದಗಿರಿಯ ನಜೀರ್ ಅಹ್ಮದ್ ಅಂಡ್ ಸನ್ ಪಾಲುದಾರಿಕೆ ಸಂಸ್ಥೆಯವರಿಂದ ದಿನಾಂಕ 25.01.2018 ರಂದು ಬಿಲ್ ನಂ.287 ರಡಿ ರೂ.3,79,500/- ಮೊತ್ತದ ತಲಾ 25 ಕೆ.ಜಿ ತೂಕದ 400 ಚೀಲ ಅಕ್ಕಿಯನ್ನು, 25.01.2018 ರಂದು ಬಿಲ್ ನಂ.288 ರಡಿ ರೂ.5,91,767/- ಮೊತ್ತದ ತಲಾ 25 ಕೆ.ಜಿ ತೂಕದ 911 ಚೀಲ ಅಕ್ಕಿಯನ್ನು, 26.01.2018 ರಂದು ಬಿಲ್ ನಂ.291 ರಡಿ ರೂ.2,37,170/- ಮೊತ್ತದ ತಲಾ 25 ಕೆ.ಜಿ ತೂಕದ 294 ಚೀಲ ಅಕ್ಕಿಯನ್ನು ಮತ್ತು 26.01.2018 ರಂದು ಬಿಲ್ ನಂ.292 ರಡಿ ರೂ.5,36,500/- ಮೊತ್ತದ ತಲಾ 25 ಕೆ.ಜಿ ತೂಕದ 580 ಚೀಲ ಅಕ್ಕಿಯನ್ನು ಖರೀದಿ ಮಾಡಿದ್ದು ಇರುತ್ತದೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ 3 ಃ ಫ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಆನಂತರ ಆರೋಪಿಯಾದ ನೀವು ಸದರಿ ಅಕ್ಕಿ ಖರೀದಿಯ ಒಟ್ಟು ಮೊತ್ತ ರೂ.17,44,937/- ಗಳನ್ನು ಪಾವತಿ ಮಾಡಲು ದಿನಾಂಕ 02.05.2018 ರಂದು ದೂರುದಾರರಿಗೆ ನೀವು ಖಾತೆ ಹೊಂದಿರುವ ಐಸಿಐಸಿಐ ಬ್ಯಾಂಕ , ಕಾಮಾರ್ ರಸ್ತೆ, ಲಾತೂರು ಶಾಖೆಯ 1) ಚೆಕ್ ನಂಃ 000921 ನೇದ್ದರ ಮೇಲೆ ದಿ ಃ19-05-2018 ರಂದು ರೂ. 3,79,500/-ಮೊತ್ತದ 2) ಚೆಕ್ ನಂಃ 000898 ನೇದ್ದರ ಮೇಲೆ ದಿ ಃ17-05-2018 ರಂದು ರೂ. 5,91,767-ಮೊತ್ತದ 3) ಚೆಕ್ ನಂಃ 000924 ನೇದ್ದರ ಮೇಲೆ ದಿ ಃ21-05-2018 ರಂದು ರೂ. 2,37,170/-ಮೊತ್ತದ 4) ಚೆಕ್ ನಂಃ000899 ನೇದ್ದರ ಮೇಲೆ ದಿ ಃ18-05-2018 ರಂದು ರೂ.5,36,500/-

ಮೊತ್ತವನ್ನು  ನಮೂದಿಸಿ ದೂರುದಾರರಿಗೆ ನೀಡಿದ್ದು ಇರುತ್ತದೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 4ಃ ಫ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ದೂರುದಾರ ಸದರಿ ಚೆಕಗಳನ್ನು ತಮ್ಮ ಖಾತೆ ಹೊಂದಿರುವ ತಮಿಳನಾಡು ಮರ್ಕೆಂಟೈಲ್ ಬ್ಯಾಂಕ್, ಯಾದಗಿರಿ ಶಾಖೆಯಲ್ಲಿ ನಗಧೀಕರಣಕ್ಕಾಗಿ ಸಲ್ಲಿಸಿದ್ದು, ಸದರಿ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ಚೆಕಗಳನ್ನು ಮರಳಿ ನೀಡಿರುತ್ತಾರೆ ಎಂದು ನುಡಿದಿದ್ದಾರೆ.  ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 5ಃ ಫ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ದೂರುದಾರ ದಿಃ 14-06-2018 ರಂದು ತಮ್ಮ ವಕೀಲರ ಮೂಲಕ ನಿಮಗೆ ನೋಟೀಸು ನೀಡಿದ್ದು, ಸದರಿ ನೋಟಿಸ್ ದಿನಾಂಕ 18.06.2018 ರಂದು Refused ಎಂಬ ಹಿಂಬರಹದೊಂದಿಗೆ ಮರಳಿ ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ  ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **6**ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಚಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **7** ಃ ನಿಮ್ಮ ಪರ ಯಾವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

(ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷ್ಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 06.09.2025 ಸಿವಿಲ್ ಮತ್ತು ಜೆ ಎಂ ಎಫ ಸಿ
ಸ್ಥಳಃ ಯಾದಗಿರಿ ನ್ಯಾಯಾಧೀಶರು,ಯಾದಗಿರಿ.